<u>ಗೌರಿಬಿದನೂರು ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯದಲ್ಲಿ</u>

ಸಿ.ಸಿ. **114/2021**
ಪಿ.ಡಬ್ಲ್ಯೂ-**6**

ಸಿ.ಡಬ್ಲ್ಯೂ-**14**

ಸಾಕ್ಷಿದಾರರ ಹೆಸರು ಃ ವಿ. ಮುರಳಿಧರಾ

ತಂದೆ ಹೆಸರು ಃ ವರಧರಾಜ್

ವಯಸ್ಸು ಃ **47** ವರ್ಷ

ಕೆಲಸ ಃ **HC**

ವಾಸ ಸ್ಥಳ ಃ ಚಿಂತಾಮಣಿ

ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾದ ದಿನಾಂಕಃ **27-01-2026**

<u>ಮುಖ್ಯ ವಿಚಾರಣೆಃ ಶ್ರೀ ಎ.ಪಿ.ಪಿ. ವಕೀಲರಿಂದಃ</u>

ದಿನಾಂಕಃ 12.08.2019 ರಿಂದ 01.08.2024 ರ ವರೆಗೆ ಗೌರಿಬಿದನೂರು ಗ್ರಾಮಂಾತರ ಠಾಣೆ ಯಲ್ಲಿ HC-211 ಆಗಿ ಕಾರ್ಯನಿರ್ವಹಿಸುತ್ತಿದೆ.

ದಿಃ 27.12.2020, ಠಾಣಾ , ಪ್ರಭಾರದಲ್ಲಿ ಇದ್ದಾಗ ರಾತ್ರಿ 8.30 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ತನ್ನ ತಮ್ಮನ ಮಗ ನರಸಿಂಹಮೂರ್ತಿ ಎನ್ನುವವರು ಸಂಜೆ 7.45 ಗಂಟೆಗೆ ಬೈಚಾರಪುರ ಕ್ರಾಸ್ ಬಳಿ ತನ್ನ ದ್ವಿಚಕ್ರವಾಹನದಲ್ಲಿ ಊರಿಗೆ ಹೋಗುತ್ತಿದ್ದಾಗ ಎದುರುಗಡೆಯಿಂದ ಕಾರು ಅತೀ ವೇಗದಿಂದ ಚಲಾಯಿಸಿಕೊಂಡು ಬಂದು ಅಪಘಾತ ಪಡಿಸಿ ಮೃತ ಪಟ್ಟಿರುತ್ತಾನೆ ಎಂದು ದೂರನ್ನು ನೀಡಲು ಬಂದಿರುತ್ತಾರೆ. ದೂರನ್ನು ಸ್ವೀಕರಿಸಿ ಠಾಣಾ ಮೊ.ಸಂ. 338/2020 ಕಲಂ. 279, 304 ಎ ರಂತೆ ಪ್ರಕರಣವನ್ನು ದಾಖಲಿಸಿ ಘನ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನ ಕೇಸಿನ ಕಡತವನ್ನು ಚಾಸಾ-15 ಕ್ಕೆ ಹಸ್ತಾಂತರ ಮಾಡಿರುತ್ತೇನೆ.

ದಿಃ 28.12.2020 ರಂತೆ ತನಿಖಾಧಿಕಾರಿಗಳೊಂದಿಗೆ ಆಸ್ಪತ್ರೆಗೆ ಭೇಟಿ ನೀಡಿ ಶವದ ಬೆಂಗಾವಲಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ಸಾಕ್ಷಿಗೆ ನಿಪಿ-1 ಅನ್ನು ತೋರಿಸಲಾಗಿ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ**-1** ಬಿ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ . ವಿ.ವಿ.ಕೆ. ವಕೀಲರಿಂದಃ

ನಿಪಿ-1 ಅನ್ನು ಸ್ವೀಕರಿಸುವ ಸಮಯದಲ್ಲಿ ದೂರುದಾರರ ಜೊತೆ ಯಾರು ಬಂದಿದ್ದರು ಎಂದರೆ 2-3 ಜನ ವ್ಯಕ್ತಿಗಳು ಬಂದಿರುತ್ತಾರೆ. ನಿಪಿ-1 ಅನ್ನು ದೂರುದಾರರೇ ಬರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ನಿಪಿ-1 ಅನ್ನು ನಾನೇ ಠಾಣೆಯಲ್ಲಿ ಬರೆದು ದೂರುದಾರರ ಬಳಿ ಸಹಿ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರ.ವ. ವರದಿ ನಂತರ ದೂರದಾರರ ಬಳಿ ಸಹಿಯನ್ನು ಪಡೆದುಕೊಂಡಿದ್ದೀರಾ ಎಂದರೆ ನೆನಪಿಲ್ಲ. ಶವದ ಬೆಂಗಾವಲಿಗೆ ನನ್ನನ್ನು ನೇಮಕ ಮಾಡದ್ದೇ ಇದ್ದರೂ ಸಹಾ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ತಪ್ಪು ಮಾಡದ್ದೇ ಇದ್ದರೂ ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ತೆ. ನ್ಯಾಸಾ.ಹೇ. ನನ್ನ ಉ.ಬೆ.ಮಾಡಲಾಯಿತು ಓಹೇ.ಕೇ.ಸ. ಇದೆ ಎಂದು ಒಪ್ಪಿರುತ್ತಾರೆ

ಸಹಿ/-
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಗೌರಿಬಿದನೂರು